# 8,176 ಪೊಲೀಸರ ನೇಮಕಾತಿ ಶುರು

## ಖಾಲಿ ಹುದ್ದೆಗಳ ಭರ್ತಿಗೆ ಚಾಲನೆ | ಒಳಮೀಸಲಾತಿ ಹೊಸ ಸೂತ್ರ ಪಾಲನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಒಳಮೀಸಲಾತಿ ಜಾರಿ ವಿಳಂಬಗೊಂಡ ಕಾರಣ ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದ ಖಾಲಿ ಹುದ್ದೆಗಳ ಭರ್ತಿಗೆ ಪೊಲೀಸ್ ಇಲಾಖೆಯಿಂದ ಚಾಲನೆ ಸಿಕ್ಕಿದೆ. ವಿವಿಧ ಘಟಕಗಳಿಗೆ 8,176 ಹುದ್ದೆಗಳ ನೇಮಕಾತಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಆದೇಶ ಹೊರಡಿಸಿದ್ದಾರೆ. 2021ರಲ್ಲಿ ಸಶಸ್ತ್ರ ಸಬ್‌ಇನ್‌ಸ್ಪೆಕ್ಟರ್‌ಗಳು ಮತ್ತು 1500 ಸಿವಿಲ್ ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿ ನೇಮಕಾತಿ ಪ್ರಕ್ರಿಯೆ ನಡೆಸಲಾಯಿತು. 545 ಮತ್ತು 402 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಬಯಲಾದ ಹಿನ್ನೆಲೆಯಲ್ಲಿ ಮತ್ಯಾವುದೇ ನೇಮಕಾತಿ ನಡೆಯಲಿಲ್ಲ. 3.5 ವರ್ಷಗಳಿಂದ ಉದ್ಯೋಗ ಆಕಾಂಕ್ಷಿಗಳು ಸಾಕಷ್ಟು ಹೋರಾಟ ನಡೆಸಿದರೂ ಪ್ರಯೋಜನವಾಗಿರಲಿಲ್ಲ. ಯುವ ಸಮೂಹ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಹೋರಾಟ ನಡೆಸಿತ್ತು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಒಟ್ಟಾರೆ ಶೇ.15ರ ಮೀಸಲಾತಿಯಲ್ಲಿ ಪ್ರವರ್ಗ-ಎಗೆ ಶೇ.5.25, ಪ್ರವರ್ಗ-ಬಿ ಶೇ.5.25 ಮತ್ತು ಪ್ರವರ್ಗ-ಸಿ ಶೇ.4.5 ಒಳಮೀಸಲಾತಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ.



ಪುಟ 5

### ವಯೋಮಿತಿ ಸಡಿಲ

ಮೂರು-ನಾಲ್ಕು ವರ್ಷದಿಂದ ಪೊಲೀಸ್ ನೇಮಕಾತಿಗೆ ಅರ್ಜಿ ಆಹ್ವಾನ ಮಾಡಿರಲಿಲ್ಲ. ಜತೆಗೆ ನೆರೆ ರಾಜ್ಯಗಳಲ್ಲಿ ವಯೋಮಿತಿ ಹೆಚ್ಚಿಗೆ ಇದ್ದ ಕಾರಣ ರಾಜ್ಯದಲ್ಲೂ 5 ವರ್ಷಗಳ ವಯೋಮಿತಿ ಶಾಶ್ವತ ಹೆಚ್ಚಳ ಮಾಡಲಾಗಿದೆ. ಈ ಪ್ರಕಾರ ಕಾನ್‌ಸ್ಟೆಬಲ್‌ಗಳಿಗೆ ಸಾಮಾನ್ಯ ವರ್ಗಕ್ಕೆ 25 ರಿಂದ 30 ವರ್ಷಕ್ಕೆ ಮತ್ತು ಎಸ್‌ಸಿ/ಎಸ್‌ಟಿಗೆ 27 ರಿಂದ 32 ವರ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಆದರೆ, ಪಿಎಸ್‌ಐಗಳ ನೇಮಕಾತಿ ನಡೆದಿಲ್ಲ ಎಂಬ ಕಾರಣಕ್ಕೆ ಮೊದಲೇ 3 ವರ್ಷ ವಯೋಮಿತಿ ಸಡಿಲ ಮಾಡಲಾಗಿತ್ತು. ಇದೀಗ ಐದು ವರ್ಷ ಶಾಶ್ವತವಾಗಿ ಹೆಚ್ಚಳ ಮಾಡಿರುವ ಪರಿಣಾಮ ಯಾವ ರೀತಿ ಇಲಾಖೆ ಪರಿಗಣಿಸಲಿದೆ ಎಂಬುದು ಕಾದು ನೋಡಬೇಕಿದೆ.

# 8,176 ಪೊಲೀಸರ ನೇಮಕಾತಿ ಶುರು

**ಮೊದಲನೇ ಪುಟದಿಂದ...**

ಜತೆಗೆ 400 ಬಿಂದುಗಳ ರೋಸ್ಟರ್‌ಗಳನ್ನು ಹೊರಡಿಸಿ ಗೊಂದಲ ನಿವಾರಿಸಿದೆ. ರಾಜ್ಯ ಪೊಲೀಸ್ ಇಲಾಖೆ ಡಿಟೆಕ್ಟಿವ್ ಸಬ್‌ಇನ್‌ಸ್ಪೆಕ್ಟರ್, ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್, ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್, ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ಮತ್ತು ಕೆಎಸ್‌ಐಎಸ್‌ಎಫ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಲಾಗಿದೆ. ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಪೂರಕವಾಗುವಂತೆ ಸರ್ಕಾರದ 400 ಬಿಂದುಗಳ ನೇರ ನೇಮಕಾತಿ ರೋಸ್ಟರ್ ಮೂಲಕ ಹಾಗೂ ಪರಿಶಿಷ್ಟ ಜಾತಿ ವಿವಿಧ ಪ್ರವರ್ಗಗಳ ಒಳ ಮೀಸಲಾತಿಯನ್ನು ಅಳವಡಿಸಲು ಪೂರಕವಾಗುವಂತೆ 60 ಬಿಂದುಗಳ ರೋಸ್ಟರ್ ನಿಗದಿಪಡಿಸಲಾಗಿದೆ. ಎಲ್ಲ ಘಟಕಗಳು ಸರ್ಕಾರದ ಆದೇಶಗಳಲ್ಲಿನ ನಿರ್ದೇಶನ ಮತ್ತು ಪರಿಷ್ಕೃತ ರೋಸ್ಟರ್‌ಗಳ ಅನುಸಾರ ಮರು ಪರಿಶೀಲಿಸಿ ತಮ್ಮ ಘಟಕಗಳಿಗೆ ಹಂಚಿಕೆ ಮತ್ತು ವರ್ಗೀಕರಣ ವಿವರವನ್ನು ತಯಾರಿಸಿ ನೇಮಕಾತಿ ವಿಭಾಗಕ್ಕೆ ಕಳುಹಿಸುವಂತೆ ಡಿಜಿ-ಐಜಿಪಿ ಸೂಚಿಸಿದ್ದಾರೆ. ಸಿವಿಲ್ ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿಗೆ ಉದ್ಯೋಗ ಆಕಾಂಕ್ಷಿಗಳಿಂದ ಒತ್ತಾಯ ಕೇಳಿಬರುತ್ತಿದೆ. ಕೆಲ ವರ್ಷಗಳ ಹಿಂದೆ ಹೈಕೋರ್ಟ್ ಪ್ರಶ್ನೆ ಮಾಡಿದ ಪರಿಣಾಮ ಕರ್ನಾಟಕ ನಾಗರಿಕ ಸೇವೆಗಳ ಅಧಿನಿಯಮ (ಕೆಸಿಎಸ್‌ಆರ್) 32ರ ಪ್ರಕಾರ ಸಹಾಯಕ ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಷರತ್ತು ವಿಧಿಸಿ ಎಸ್‌ಐ ಹುದ್ದೆಗಳ ಬಡ್ತಿ ನೀಡಲಾಗಿತ್ತು. ಯಾವ ಸಮಯದಲ್ಲಿ ಬೇಕಾದರೂ ಹಿಂಬಡ್ತಿ ಪಡೆಯುತ್ತೇವೆ ಎಂದು ಇಲಾಖೆ ಷರತ್ತು ವಿಧಿಸಿತ್ತು. ಇದೀಗ ಹಿಂಬಡ್ತಿ ಪಡೆದರೆ ಗೊಂದಲ ಉಂಟಾಗಲಿದೆ ಎಂಬ ಕಾರಣಕ್ಕೆ ಪೊಲೀಸ್ ಇಲಾಖೆ ಕೈಬಿಟ್ಟಿದೆ. ಇದರ ಪರಿಣಾಮ ನೇರ ನೇಮಕಾತಿಗೂ ಅಡ್ಡಿ ಉಂಟಾಗಿ 600 ಪಿಎಸ್‌ಐಗಳ ನೇಮಕಾತಿಗೆ ಸರ್ಕಾರ ಒಪ್ಪಿಗೆ ಕೊಟ್ಟಿದ್ದರೂ ಪ್ರಕ್ರಿಯೆ ಶುರು ಮಾಡಲು ಹಿಂದೇಟು ಹಾಕುತ್ತಿದೆ. ಇತ್ತ ಐದಾರು ವರ್ಷದಿಂದ ಪಿಎಸ್‌ಐ ಹುದ್ದೆಗೆ ಕಾಯುತ್ತಿರುವ ಉದ್ಯೋಗ ಆಕಾಂಕ್ಷಿಗಳ ವಯೋಮಿತಿ ಮೀರುತ್ತಿದೆ.

## ನೇಮಕಾತಿ ವಿವರ

| ಹುದ್ದೆಗಳು | ಎಚ್‌ಕೆ | ನಾನ್‌ಎಚ್‌ಕೆ | ಒಟ್ಟು |
|---|---|---|---|
| ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ (ಡಿಎಸ್‌ಐ) | 05 | 15 | 20 |
| ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಎಪಿಸಿ) | 275 | 1375 | 1650 |
| ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್ (ಸಿವಿಲ್) | 610 | 3500 | 4110 |
| ಸ್ಟೇಟ್ ರಿಸರ್ವ್ ಪೊಲೀಸ್ ಕಾನ್‌ಸ್ಟೆಬಲ್ (ಕೆಎಸ್‌ಆರ್‌ಪಿ) | 532 | 1500 | 2032 |
| ಪೊಲೀಸ್ ಕಾನ್‌ಸ್ಟೆಬಲ್ (ಕೆಎಸ್‌ಐಎಸ್‌ಎಫ್) | 364 | 00 | 364 |

■ ಎಚ್‌ಕೆ - ಹೈದರಾಬಾದ್ ಕರ್ನಾಟಕ

■ ನಾನ್‌ಎಚ್‌ಕೆ - ಹೈದರಾಬಾದ್ ಕರ್ನಾಟಕ ಹೊರತಾಗಿ